## ಮಾತು-ಕತೆ

ನನ್ನ ತಾಯಿ, ಅವರ ನಡವಳಿಕೆ ಮತ್ತು ನಮ್ಮ ಮನೆಯ ಬಾವಿ – ಇವು ನನ್ನ ಮೇಲೆ ವಿಶೇಷವಾದ ಪ್ರಭಾವ ಬೀರಿವೆ. ನಮ್ಮ ಬಾವಿಯ ನೀರು ಸಿಹಿನೀರು. ನಮ್ಮ ಸುತ್ತಮುತ್ತಲಿನ ಎಲ್ಲ ಬಾವಿಗಳಲ್ಲಿ ಮಳೆಗಾಲದಲ್ಲಿ ಮಾತ್ರ ಸಿಹಿನೀರಿರುತ್ತದೆ; ಉಳಿದ ಸಮಯದಲ್ಲಿ ಉಪ್ಪುನೀರಾಗಿರುತ್ತದೆ. ಯಾಕೆಂದರೆ ಉದ್ಯಾವರ ಹೊಳೆ ಅಲ್ಲಿ ಒಂದು ಸರ್ಕಲ್ಲಾಗಿ ಬರುತ್ತದೆ. ಹಾಗೆ ಬರುವಾಗ ಇಡೀ ನಮ್ಮ ಕೋಟೆ ಗ್ರಾಮವನ್ನು ಸುತ್ತುವರಿದು ಹೋಗುತ್ತದೆ. ಅಲ್ಲಿನ ನಮ್ಮ ಗದ್ದೆಗಳಲ್ಲಿಯೂ ಒಂಥರ ಉಪ್ಪುನೀರಿನ ಅಂಶ ಇರ್ತದೆ. ಅಷ್ಟು ಪ್ರಖರವಾದ ಉಪ್ಪುನೀರದು.

ಕೆಲವು ಬ್ರಾಹ್ಮಣರ ಮನೆಯ ಕೆಲವು ಬಾವಿಗಳಲ್ಲಿ ಸಿಹಿನೀರು ಇರ್ತದೆ. ಹಾಗೆಯೇ ಗ್ರಾಮದ ಕೊನೆಯಲ್ಲಿ ಕೆಲವು ಸಿಹಿನೀರಿನ ಬಾವಿಗಳು ಇವೆ. ನಮ್ಮ ಮನೆಯ ಬಾವಿಗೆ ನಮ್ಮ ತಂದೆತಾಯಿ ಯಾವತ್ತೂ ಯಾವುದೇ ತಡೆಯನ್ನಾಗಲಿ, ಧಾರ್ಮಿಕ ಮೂಢನಂಬಿಕೆಗಳನ್ನಾಗಲಿ ಹೇರಿದ್ದಿಲ್ಲ. ಯಾವಾಗ ಬೇಕಾದ್ರೂ ಯಾರು ಬೇಕಾದ್ರೂ ಬಂದು ನೀರು ಕೊಂಡು ಹೋಗಬಹುದಿತ್ತು. 'ನೀರಿಗೆಂಥ ಜಾತಿ?' ಎಂಬುದು ನನ್ನ ತಾಯಿಯ ನೀತಿ. 'ನೀರು ಅಲ್ಲಾಹ್ ಕೊಟ್ಟಿದ್ದು; ಅದನ್ನು ನಾವು ಹಂಚಿ ಬಳಸಬೇಕು. ಅದಕ್ಕೆ ಅವರು ಇವರು ಅಂತೆಲ್ಲ ಭೇದ ಮಾಡಬಾರದು' ಎನ್ನುತ್ತಿದ್ದರು ಅವರು. ಬಾವಿಕಟ್ಟೆಯಲ್ಲಿ ತುಂಬ ಜನ ಬಂದಿದ್ದರಿಂದ ಗಲೀಜು ಆಗ್ತಿತ್ತು. ಅದನ್ನೆಲ್ಲ ಕ್ಲೀನ್ ಮಾಡಿಸಿ, ಬಾವಿಹಗ್ಗ ಎಲ್ಲ ನಾವೇ ಪ್ರೊವೈಡ್ ಮಾಡ್ತಿದ್ದೆವು.

ನಮ್ಮ ಮನೆಯಲ್ಲಿ ಒಂದು ದೊಡ್ಡ ಹರಿವಾಣ ಇತ್ತು. ಅದರಲ್ಲಿ ವೀಳ್ಯದೆಲೆ, ಅಡಿಕೆ ತಂಬಾಕು, ಸುಣ್ಣ ಎಲ್ಲ ಹಾಕಿ ಇಡುತ್ತಿದ್ದರು. ಬರುವ ಹೆಂಗಸರು ಅದನ್ನು ತಿಂದು ತಾಯಿಯೊಟ್ಟಿಗೆ ನಾಲ್ಕು ಮಾತಾಡಿ ಹೋಗುವುದು ವಾಡಿಕೆ. ನನ್ನ ತಾಯಿ ಕೂಡ ಅವರ ಮನೆಯ ವಿಷಯವನ್ನು, ಅವರ ಮನೆ, ಮಕ್ಕಳ ಆರೋಗ್ಯದ ಬಗ್ಗೆಯೆಲ್ಲ ಮಾತಾಡುತ್ತಿದ್ದರು. ಅಲ್ಲದೆ ನನ್ನ ತಾಯಿ ಮಕ್ಕಳಿಗೆ ಕೆಮ್ಮು ನೆಗಡಿಯಂಥ ಸಣ್ಣಪುಟ್ಟ ಕಾಯಿಲೆಗಳಿಗೆ ಮದ್ದು ಕೊಡ್ತಿದ್ದರು. ಸಂಬಾರದ ಬಳ್ಳಿಯ ರಸ, ತುಳಸಿ ರಸ, ಶುಂಠಿ ರಸ – ಹೀಗೆ ಹಲವು ಬಗೆಯ ರಸಗಳನ್ನು ಸೇರಿಸಿದ ಮದ್ದು ಕೊಡ್ತಿದ್ದರು. ಹಾಗಾಗಿ ಊರ ಹೆಂಗಸರೆಲ್ಲ ತಾಯಿಯನ್ನು ತುಂಬ ಲೈಕ್ ಮಾಡ್ತಾ ಇದ್ರು.

ಅವರಲ್ಲಿ ಹಲವು ರೀತಿಯ ನಂಬಿಕೆಗಳೂ ಇದ್ದವು. ಗರ್ಭಿಣಿ ಹೆಂಗಸು ನೀರಿಗೆ ಬಂದರೆ ಅವರ ನೆತ್ತಿಗೆ ಕೊಬ್ಬರಿ ಎಣ್ಣೆ ಹಚ್ಚಿ 'ನಿನ್ನ ತಲೆ ತಂಪಾಗಿರಲಮ್ಮ. ನೀನು ಒಳ್ಳೆಯ ರೀತಿಯಲ್ಲಿ ಹೆತ್ತು ನನಗೆ ಬಂದು ಮಗುವನ್ನು ತೋರಿಸು' ಎಂದು ಹೇಳಿಕಳಿಸುತ್ತಿದ್ದರು. ನಮ್ಮ ತಾಯಿ ಹತ್ರ ತುಂಬ ಆಭರಣಗಳಿದ್ದವು. ಊರಿನಲ್ಲಿ, ಪಕ್ಕದ ಊರಿನಲ್ಲಿ ಮದುವೆ ಇದ್ದಾಗ ಹೆಂಗಸರು ಬಂದು ಆ ಆಭರಣಗಳನ್ನು ಕೇಳಿ ಕೊಂಡುಹೋಗುತ್ತಿದ್ದರು. ಕೊಂಡುಹೋಗಿ ಮದುಮಗಳಿಗೆ ಹಾಕಿ ಒಂದು ವಾರವೋ ಎರಡು ಮೂರು ದಿವಸವೋ ಇಟ್ಟುಕೊಂಡು ಮತ್ತೆ ಬಂದು ತಂದುಕೊಡೋದು. ಜೊತೆಗೆ ಮದುವೆಯ ಸಿಹಿತಿಂಡಿಗಳು, ಪಾಯಸ ಎಲ್ಲ ತಂದುಕೊಡ್ತಾ ಇದ್ರು. ಅದೆಲ್ಲ ಒಂದು ರೀತಿಯಲ್ಲಿ ಅನ್ಯೋನ್ಯತೆ ಬೆಳೆಯುವ ವಾತಾವರಣ ಸೃಷ್ಟಿಯಾಗಿತ್ತು. ಈ ಬಾವಿ ಮತ್ತು ತಾಯಿ ನನ್ನ ಮೇಲೆ ಮಾಡಿರುವ ಪ್ರಭಾವ ತುಂಬ ದೊಡ್ಡದು. ಆದ್ದರಿಂದ ನನ್ನ ಕಥೆಗಳಲ್ಲಿ ಅಲ್ಲಲ್ಲಿ ಈ ಪ್ರಭಾವಗಳು ಕಾಣಿಸುತ್ತವೆ.

ಹೀಗೆ ಎಲ್ಲರೂ ಮಿಂಗಲ್ ಆಗಿ ಬೆರೆಯುವ ವಾತಾವರಣ ಅಲ್ಲಿ ಇತ್ತು. ಯಾರೂ ಕೂಡ ನಾನು ಮುಸ್ಲಿಮ, ಅವನು ಹಿಂದೂ, ಕ್ರಿಶ್ಚಿಯನ್ ಅಂತ್ಹೇಳಿ ಭೇದವೇ ಮಾಡ್ತಿರ್ಲಿಲ್ಲ. ಬ್ರಾಹ್ಮಣರು ಕೂಡ ನಮ್ಮನ್ನು ಬಹಳ ಆದರದಿಂದ ನೋಡ್ಕೊಳ್ತಾ ಇದ್ರು. ನಮ್ಮ ಮನೆಗೆ ಬಂದು ತಿಂಡಿ ತಿನ್ನುವುದೆಲ್ಲ ಇರಲಿಲ್ಲ. ಆದರೆ ನಮ್ಮ ಈದ್‌ನ ಸಂದರ್ಭಗಳಲ್ಲಿ ನಾವು ಕೊಡುವ ಹಣ್ಣುಗಳನ್ನೆಲ್ಲ ಸ್ವೀಕರಿಸ್ತಿದ್ರು. ನಮ್ಮ ಮನೆಯಲ್ಲಿ ತಾಯಿ ಕೆಸುವಿನ ಗಿಡ, ಬಾಳೆ ಗಿಡಗಳನ್ನೆಲ್ಲ ಬೆಳೆಸಿದ್ರು. ಅದರ ಎಲೆಗಳನ್ನು ಅವರು